4. ಉಡುಪಿ ತಾಲ್ಲೂಕಿನ ಕೋಟಗೋಳಿ ಅಂಗಡಿ ರಸ್ತೆಯ ಡಾಂಬರೀಕರಣ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷಣಿಯವರೇ ಉಡುಪಿ ತಾಲ್ಲೂಕಿನ ಕೋಟಗೋಳಿ ಅಂಗಡಿ ರಸ್ತೆ ಕರಾವಳಿ ಒಳನಾಡುಗಳನ್ನು ಜೋಡಿಸುವ ಪ್ರಮುಖ ಸಂಪರ್ಕ ರಸ್ತೆ ಸಾರ್ವಜನಿಕ ಕಾವಂಗಾರಿ ಇಲಾಖೆಯ ನಿರ್ವಹಣೆಗೊಳಪಟ್ಟು ಈ ರಸ್ತೆಯಲ್ಲಿ ಕಳೆದ ಎರಡು ದಶಕಗಳಿಂದ ಬಸ್ಸುಗಳು ಬಹುಕಷ್ಟದಿಂದ ಸಂಚರಿಸುತ್ತಿವೆ ಮಧ್ಯೆ ಮಧ್ಯೆ ಪ್ರಯಾಣ ನಿಲ್ಲಿಸುವ ಪರಿಸ್ಥಿತಿ ಬರುತ್ತದೆ ಅಕಾರಣದಿಂದಾಗಿ ಆಭಾಗದ ಹಿಲಿಯಾಣ ಅವಸ್ರ್ ವಂಗಾರು ಶಿರೂರು ಬಿಲ್ಲಾಕಿ ಶಿರಿಯಾಳ ಗ್ರಾಮಗಳ ಸಾರ್ವಜನಿಕರು ಲೋಕೋಪಯೋಗಿ ಇಲಾಖೆಯ ಮೇಲೆಯೇ ಕೋಪಗೊಳ್ಳುವಂತಾಗಿದೆ ಕಾರಣ ಆ ರಸ್ತೆಯ ಕೆಲವು ಭಾಗಕ್ಕೆ ತಾರಿನ ಹೊದಿಕೆ ಇಲ್ಲದಿರುವುದು ಈ ವಿಚಾರದಲ್ಲಿ ಸೂಕ್ತ ಗಮನ ಹರಿಸಿ ಡಾಂಬರ್ ಹೊದಿಕೆಗಾಗಿ ಆದ್ಯತೆ ಮೇಲೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು) —ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳ ಭಾಗಕ್ಕೆ ಸಂಪರ್ಕ ಕಲ್ಪಿಸುವ ಕೋಟಗೋಳಿ ಅಂಗಡಿ ರಸ್ತೆಯು ೨೬.೬೦ ಕಿ.ಮೀ. ಗಳ ಉದ್ದವಿದ್ದು, ಅದರಲ್ಲಿ ಒಟ್ಟು ೧೯.೭೬ ಕಿ.ಮೀ.ಗಳ ಉದ್ದಕ್ಕೆ ಡಾಂಬರಿನ ಮೇಲ್ಮೈ ಇರುತ್ತದೆ. ಉಳಿದ ೬.೪೪ ಕಿ. ಮೀ. ಉದ್ದಕ್ಕೆ ಜಲ್ಲಿ ಮೇಲ್ಮೈ ಇರುತ್ತದೆ. ೧೯೮೯-೯೦ನೇ ಸಾಲಿನಲ್ಲಿ ಅತೀ ಕೆಟ್ಟು ಹೋಗಿರುವ ಭಾಗಗಳಿಗೆ ಸುಧಾರಣೆ ಮತ್ತು ಡಾಂಬರೀಕರಣ ಕಾಮಗಾರಿಯನ್ನು ಸುಮಾರು ೩.೫ ಲಕ್ಷ ರೂ.ಗಳ ಖರ್ಚಿನಲ್ಲಿ ಮಾಡಲಾಗಿದೆ. ಈ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೆ ಜುಲೈ ೧೯೮೨ರಲ್ಲಿ ಮಾರ್ಪಡಿಸಲಾಗಿತ್ತು. ತದನಂತರ ಈ ರಸ್ತೆಗೆ ೧೯೮೯-೯೦ನೇ ಸಾಲಿನವರೆಗೂ ಸುಮಾರು ೬.೦೦ ಲಕ್ಷರೂ. ಗಳನ್ನು ಅಭಿವೃದ್ಧಿಗೆ ಹಾಗೂ ದುರಸ್ತಿಗೆ ವೆಚ್ಚ ಮಾಡಲಾಗಿದೆ. ಈ ಪ್ರಸಕ್ತ ಸಾಲಿನಲ್ಲಿ ಈ ರಸ್ತೆಯ ಆಯ್ದ ಭಾಗಗಳ ಸುಧಾರಣೆಗಾಗಿ ಯೋಜನೆಯಲ್ಲಿ ೯೦,೦೦೦ ರೂ. ಗಳನ್ನು ನಿಗಧಿಪಡಿಸಲಾಗಿದೆ.

ಈ ರಸ್ತೆಯು ಅತೀ ಕೆಟ್ಟು ಹೋದ ಭಾಗಗಳ ದುರಸ್ತಿ, ನಿರ್ವಹಣೆ ಹಾಗೂ ಪುನರ್ ಡಾಂಬರೀಕರಣವನ್ನು ಲಭ್ಯವಿರುವ ಯೋಜನೇತರ ಅನುದಾನದಲ್ಲಿ ತೆಗೆದುಕೊಂಡು ಈ ರಸ್ತೆಯನ್ನು ಸುಸ್ಥಿತಿಯಲ್ಲಿರುವಂತೆ ಹಾಗೂ ಈ ರಸ್ತೆಯ ಜಿಲ್ಲಾ ಹೊದಿಕೆಯ ಭಾಗಗಳನ್ನು ಡಾಂಬರೀಕರಣ ಮಾಡುವುದಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳವರಿಗೆ ಸೂಚಿಸಲಾಗಿದೆ.

5. ಉಡುಪಿ ತಾಲ್ಲೂಕು ಬ್ರಹ್ಮಾವರದಲ್ಲಿ ಕೈಗಾರಿಕಾ ಎಸ್ಟೇಟ್

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ಬ್ರಹ್ಮಾವರ ಒಂದು ಪ್ರಮುಖ ಕೇಂದ್ರ. ಮುಂದೆ ತಾಲ್ಲೂಕು ಕೇಂದ್ರವಾಗಲು ಪರಿಗಣಿತವಾದ ಸ್ಥಳ. ಆ ಪರಿಸರದಲ್ಲಿ ಅನೇಕ ಕೈಗಾರಿಕೆಗಳಿದ್ದು, ಮುಂದೆ ಉದ್ದಿಮೆಗಳ ಅಭಿವೃದ್ಧಿಗೆ ತುಂಬಾ ಅವಕಾಶವಿದೆ. ಬೇಕಾದಷ್ಟು ಜಾಗಾ ಕೂಡ ಇದೆ. ಅನೇಕ ಮಂದಿ ಉದ್ಯೋಗಾರ್ಥಿಗಳಿದಾದ ಯುವ ಜನರು ಆ ಪ್ರದೇಶದಲ್ಲಿದ್ದಾರೆ ಆದ್ದರಿಂದ ಬ್ರಹ್ಮಾವರದಲ್ಲಿ ಒಂದು ಕೈಗಾರಿಕೆ ಎಸ್ಟೇಟನ್ನು ಪ್ರಾರಂಭಿಸಲು ಶೀಘ್ರ ಕ್ರಮ ಕೈಗೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀಮತಿ ಸುಮಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು).— ಮಾನ್ಯ ಅಧ್ಯಕ್ಷರೇ ಉಡುಪಿ ತಾಲ್ಲೂಕಿನ ಮಣಿಪಾಲದಲ್ಲಿ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿದ್ದು, ಅದೇ ತಾಲ್ಲೂಕಿನ ಬ್ರಹ್ಮಾವರದಲ್ಲಿ ಇನ್ನೊಂದು ಕೈಗಾರಿಕಾ ವಸಾಹತುವನ್ನು ಸ್ಥಾಪಿಸುವ ಉದ್ದೇಶ ನಿಗಮಕ್ಕಿಲ್ಲ.

6. ಬೆಂಗ್ರೆಯಲ್ಲಿ ವಾಸವಾಗಿರುವ ಮೀನುಗಾರರಿಗೆ ತೆರಿಗೆ ಹೆಚ್ಚು ಮಾಡಿರುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರು ಕಸಬಾ ಬೆಂಗ್ರೆಯಲ್ಲಿ ವಾಸವಾಗಿರುವ ಬಡವರಾದ ಮೀನುಗಾರರಿಗೆ ಬಂದರು ಅಧಿಕಾರಿಗಳು ತೆರಿಗೆಯನ್ನು ಹಿಂದಿಗಿಂತ ಹತ್ತು ಪಾಲು ಹೆಚ್ಚು ಮಾಡಿದರು. ಅದಕ್ಕೆ ಬೆಂಗ್ರೆಯ ಜನರು ಮೀನುಗಾರಿಕಾ ಮಂತ್ರಿಗಳಿಗೆ ಮನವಿ